**ಅಪರ ಸಿವಿಲ್ ಜಡ್ಜ್ ಮತ್ತು ಜೆಎಮಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ.ನಂ.1342-2019**

| | | |
|---|---|---|
| ಹೆಸರು | : | ಎಂ ಭಾಸ್ಕರ ಶೆಟ್ಟಿ |
| ತಂದೆ ಹೆಸರು | : | ಶಿವಣ್ಣ |
| ವಯಸ್ಸು | : | 53 |
| ಉದ್ಯೋಗ | : | ಎಲ್ ಐ ಸಿ ಏಜೆಂಟ್ |
| ವಾಸ | : | ಭಾರತಿನಗರ |

ಡಿಡಬ್ಲ್ಯೂ-1,
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 05.08.2026

**ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದಃ**

1. ನನಗೆ ಭಾರತಿನಗರದಲ್ಲಿ ಸ್ವಂತ ಮನೆ ಇದ್ದು ಸದರಿ ಮನೆಯನ್ನು ಮಾರಾಟ ಮಾಡುವ ಸಲುವಾಗಿ ಕೆ ಮುನಿಯಪ್ಪ ಎಂಬುವವರಿಗೆ 2014 ರಲ್ಲಿ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತೇನೆ. ಆ ಸಂದರ್ಭದಲ್ಲಿ ಸಹಿ ಮಾಡಿರುವ ಮೂರು ಖಾಲಿ ಚೆಕ್ಕುಗಳನ್ನು ಕೆ ಮುನಿಯಪ್ಪ ಅವರಿಗೆ ನೀಡಿರುತ್ತೇನೆ. ನಂತರ ಸದರಿ ಕ್ರಯದ ಕರಾರು ವಿಚಾರವಾಗಿ ಮುನಿಯಪ್ಪ ಅವರು ನನ್ನ ವಿರುದ್ಧ ಕ್ರಯದ ಕರಾರು ನಿರ್ದಿಷ್ಟ ಅನುಷ್ಠಾನಕ್ಕಾಗಿ ದಾವೆಯನ್ನು ಹೂಡಿದ್ದು ವಿಚಾರಣೆ ಬಾಕಿ ಇರುತ್ತದೆ. ಈ ಪ್ರಕರಣದ ಪಿರ್ಯಾದುದಾರರಾದ ಮುನಿರಾಜು ಮತ್ತು ಮೇಲೆ ಹೇಳಿದ ಕೆ ಮುನಿಯಪ್ಪ ಅವರು ಸ್ನೇಹಿತರಾಗಿರುತ್ತಾರೆ. ನಾನು ಮುನಿಂಯಪ್ಪ ಅವರಿಗೆ ನೀಡಿರುವ ಚೆಕ್ಕುಗಳನ್ನು ಬಳಸಿಕೊಂಡು ಮುನಿಯಪ್ಪ ಅವರು ಪಿರ್ಯಾದುದಾರರ ಮೂಲಕ ನನ್ನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ. ನನಗೂ ಮತ್ತು ಪಿರ್ಯಾದುದಾರರಿಗೂ ಯಾವುದೇ ಹಣದ ವ್ಯವಹಾರ ನಡೆದಿರುವುದಿಲ್ಲ. ನಾನು ಪಿರ್ಯಾದುದಾರರಿಂದ ಯಾವುದೇ ಸಾಲ ಪಡೆದಿಲ್ಲ ಮತ್ತು ಯಾವುದೇ ಹಣ ಬಾಕಿ ಇರುವುದಿಲ್ಲ.

(ಈ ಹಂತದಲ್ಲಿ ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೇಳಿದ್ದು ಸಮಯ ನೀಡಲಾಯಿತು)

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ದೇವನಹಳ್ಳಿ.